* * *

ಆಸ್ಟ್ರೇಲಿಯಾಕ್ಕೆ ವಲಸೆ ಬಂದ ಸೀತಾರಾಮ್ ಮತ್ತು ಪಾರ್ವತಿಯವರ ಮಗಳು ನಯನಾ. ತಂದೆ ಕಂಪ್ಯೂಟರ್ ಪ್ರವೀಣರು, ತಾಯಿ ಶಿಕ್ಷಕಿ. ಅವರ ಇಬ್ಬರು ಗಂಡುಮಕ್ಕಳು ಭಾರತದಲ್ಲಿ ಜನಿಸಿದರೆ, ನಯನಾ ಇಲ್ಲಿ ಸಿಡ್ನಿಯಲ್ಲಿ ಜನ್ಮತಾಳಿದಳು. ಗಂಡುಮಕ್ಕಳು ವಿಧೇಯರು. ಒಬ್ಬ ವೈದ್ಯನಾದ, ಇನ್ನೊಬ್ಬ ಲಾಯರ್ ಆದ. ಇಬ್ಬರೂ ಇಲ್ಲಿಯ ಹುಡುಗಿಯರನ್ನೇ ಮದುವೆಯಾಗಿ ಸಂಸಾರ ನಡೆಸುತ್ತಿದ್ದಾರೆ. ಇಬ್ಬರಿಗೂ ಚಿಕ್ಕ ಚಿಕ್ಕ ಮಕ್ಕಳು. ಹಬ್ಬವಾದರೆ ಮನೆ ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳಿಂದ ತುಂಬಿಹೋಗುತ್ತಿತ್ತು. ವಿಪರೀತ ಸಡಗರ.

ಆದರೇಕೋ ನಯನಾ ಭಿನ್ನ. ಯಾರನ್ನಾದರೂ ಆಕರ್ಷಿಸುವ ಸೌಂದರ್ಯ. ಬುದ್ಧಿವಂತೆ ಕೂಡ. ಏನಾದರೂ ತಂದೆತಾಯಿಯರ ಮಾತನ್ನು ಕೇಳುತ್ತಿರಲಿಲ್ಲ. ತನ್ನದೇ ದಾರಿ. ಶಾಲೆಯಲ್ಲಿ ಪಿಯಾನೋ ಬಿಟ್ಟು ಹಾಕಿ ಟೀಮಿಗೆ ಸೇರಿಕೊಂಡಳು. ಮನೆಯಲ್ಲಿ ಹಬ್ಬ ಎನಿಸಿದಾಗ ಹಾಕಿ ಮ್ಯಾಚ್ ಇದೆ ಎಂದು, ಗೆಳತಿಯೊಬ್ಬಳ ಮನೆಯಲ್ಲಿ ಕಾಲ ಕಳೆಯುತ್ತಿದ್ದಳು. ಬೇಡ ಎಂದದ್ದನ್ನು ಮಾಡಿಯೇ ತೀರಬೇಕು. ಎಚ್.ಎಸ್.ಸಿ ಪರೀಕ್ಷೆಯಲ್ಲಿ 99.5 ಅಂಕಗಳಿಸಿದಾಗ ತಂದೆ ತಾಯಿ ಬೇಡಿಕೊಂಡರು- ಓದಿ ಡಾಕ್ಟರ್ ಆಗು. ಒಲ್ಲೆ ಎಂದು ಕೆಮಿಸ್ಟ್ರಿ ತೆಗೆದುಕೊಂಡು ಎಂ.ಎಸ್.ಸಿ ಅತ್ತ ಸಾಗಿದಳು. ಮನೆಯಲ್ಲಿ ಅವಳೊಡನೆ ಮಾತನಾಡುವುದೇ ಕಷ್ಟ ಎನಿಸಿತು. ಆದರೆ, ನಯನಾ ಏನೇ ಕೈಗೊಂಡರೂ ಅದನ್ನು ನಿಭಾಯಿಸುತ್ತಾಳೆ ಎಂಬ ಧೈರ್ಯ ಮತ್ತು ವಿಶ್ವಾಸ ಅವಳ ತಂದೆ ತಾಯಿಯರಿಗೆ.

ಎಂ.ಎಸ್.ಸಿಯಲ್ಲಿಯೂ ರ್‍ಯಾಂಕ್ ಗಿಟ್ಟಿಸಿದಳು. ಮನೆಯಲ್ಲಿ ತಂದೆ ತಾಯಿಯರ ಒತ್ತಡ ಪ್ರಾರಂಭವಾಯಿತು. “ಇನ್ನು ನೀನು ಮದುವೆಯಾಗಬೇಕು. ನೀನೇ ನೋಡಿಕೊಂಡರೂ ಸರಿ. ಇಲ್ಲವಾದಲ್ಲಿ ನಾವೇ ಹುಡುಕುತ್ತೇವೆ.”

“ನಿಮಗೆ ಆ ಜವಾಬ್ದಾರಿ ಬೇಡ. ಮದುವೆ ವೈಯಕ್ತಿಕ ವಿಷಯ. ನನಗೆ ಬೇಕೆನಿಸಿದರೆ, ಬೇಕೆನಿಸಿದಾಗ ನಾನೇ ಗಂಡನನ್ನು ಹುಡುಕಿಕೊಳ್ಳುತ್ತೇನೆ” ಎಂದು ಹೇಳಿ ಮುಂದಿನ ಚರ್ಚೆಯನ್ನು ತಡೆದಿದ್ದಳು.

ಮೊದಲೇ ರೂಪವತಿ. ಕೇಳಬೇಕೆ? ಹಲವಾರು ಹುಡುಗರು ಅವಳ ಸುತ್ತಾ ತಿರುಗಿದ್ದರು. ಇಬ್ಬರು ಹತ್ತಿರವೂ ಬಂದರು. ಇಬ್ಬರೂ ಭಾರತೀಯರೇ. ಇಬ್ಬರೊಡನೆಯೂ ಕೆಲಕಾಲ ಓಡಾಡಿದಳು. ಕೊನೆಗೆ ಇಬ್ಬರನ್ನೂ ಓಡಿಸಿದಳು. ಒಬ್ಬ ತಂದೆ ತಾಯಿಯರ ಅಧೀನನಾಗಿದ್ದ. ಪ್ರತಿಯೊಂದಕ್ಕೂ ಅವರ ಅನುಮತಿ, ಒಪ್ಪಿಗೆಗಳನ್ನು ಪಡೆಯುತ್ತಿದ್ದ. ಸ್ವತಂತ್ರ ಪ್ರವೃತ್ತಿ ಇರಲಿಲ್ಲ. ಮತ್ತೊಬ್ಬ ಐಟಿ ಪ್ರವೀಣ. ಒಳ್ಳೆಯ ಸಂಬಳ. ಆದರೆ, ತನ್ನ ಕೆಲಸ ಬಿಟ್ಟು ಅವನಿಗೆ ಮತ್ತೇನೂ ತಿಳಿದಿರಲಿಲ್ಲ. ಬಹಳ ಬೋರಿಂಗ್ ವ್ಯಕ್ತಿ. ವಿಷಯ ತಿಳಿದಾಗ ತಂದೆ ತಾಯಿ ಮರುಗಿದರು. “ಪೆದ್ದ ಹುಡುಗಿ. ಮೊದಲು ಮದುವೆಯಾಗಿ ನಂತರ ಹುಡುಗನನ್ನು ಪರಿವರ್ತಿಸುವುದು ಕಷ್ಟವೇ? ಅದೂ ಇವಳಿಗೆ? ಏನಾಗುತ್ತೋ ಆಗಲಿ” ಎಂದು ಸುಮ್ಮನಾದರು. ಆದರೂ ಆಗಾಗ್ಗೆ ಜ್ಞಾಪಿಸುತ್ತಿದ್ದರು.

ಎಂ.ಎಸ್.ಸಿ ಮಾಡಿದ ಮೇಲೆ ಮುಂದೇನು ಎಂಬ ಪ್ರಶ್ನೆ ಮೂಡುವ ಮೊದಲೇ ಅವಕಾಶವೊಂದು ಹುಡುಕಿಕೊಂಡು ಬಂದಿತ್ತು. ಸಿಡ್ನಿಯಲ್ಲಿದ್ದ ವಿಶ್ವವಿದ್ಯಾಲಯವೊಂದರಲ್ಲಿ ವಿಲಿಯಮ್ ಟರ್ನರ್ ಎಂಬ ಬಯೋ ಕೆಮಿಸ್ಟ್ರಿ ವಿಭಾಗದ ಪ್ರೊಫೆಸರ್ ಸಂಶೋಧನಾ ಸಹಾಯಕರನ್ನು ಬಯಸಿ ಜಾಹಿರಾತನ್ನು ನೀಡಿದ. ಅವನ ಸಂಶೋಧನೆಯೊಂದಕ್ಕೆ ಯಾವುದೋ ಕಂಪೆನಿಯಿಂದ ಐದು ಮಿಲಿಯನ್ ಡಾಲರುಗಳ ದೇಣಿಗೆ ದೊರಕಿತ್ತು. ಮೂರು ಅಥವಾ ನಾಲ್ಕು ವರ್ಷಗಳ ಕೆಲಸ ಅದು. ಅದರಲ್ಲಿ ಸಂಶೋಧನೆ ಮಾಡಲು ಬುದ್ಧಿವಂತ ಮಂದಿ ಬೇಕಿತ್ತು. ಉದಾರ ಸಂಬಳ. ಅಭ್ಯರ್ಥಿಗಳು ತಮ್ಮ ಸಂಶೋಧನೆಯನ್ನೇ ಆಧರಿಸಿ ಥೀಸಿಸ್ ಬರೆದು ಪಿಎಚ್.ಡಿ ಪದವಿ ಪಡೆಯುವ ಅವಕಾಶವೂ ಇತ್ತು. ಈ ಪ್ರಾಜೆಕ್ಟ್ ಮುಗಿದ ನಂತರ ಅಲ್ಲಿಯೇ ಖಾಯಂ ಕೆಲಸ ಸಿಗುವ ಸಾಧ್ಯತೆಯೂ ಇತ್ತು. ಅಲ್ಲದೆ ಟರ್ನರ್ ಹೆಸರಾಂತ ವಿಜ್ಞಾನಿ. ವಯಸ್ಸು ಇನ್ನೂ ಐವತ್ತಿಲ್ಲ. ಬಹು ಪ್ರಸಿದ್ಧನಾಗಿದ್ದ. ಅವನಿಗೆ ಇಂದಲ್ಲ ನಾಳೆ ನೊಬೆಲ್ ಬಹುಮಾನ ಬರುವುದು ಗ್ಯಾರೆಂಟಿ ಎಂದೂ ವಿದ್ಯಾರ್ಥಿಗಳು ಮಾತನಾಡಿಕೊಳ್ಳುತ್ತಿದ್ದರು.

ನಯನಾ ಒಮ್ಮೆಗೆ ಬಹು ಆಕರ್ಷಣೀಯ ಅರ್ಜಿಯನ್ನು ಸಿದ್ಧಪಡಿಸಿ ಆತನಿಗೆ ಕಳಿಸಿದಳು. ಇದೂ ತನ್ನ ನೆರವಿಗೆ ಬಂದೀತು ಎಂದು ಫೋಟೊ ಲಗತ್ತಿಸುವುದನ್ನು ಮರೆಯಲಿಲ್ಲ. ಅರ್ಜಿ ಹೋಗಿ ಇನ್ನೂ